# ಹೊರ ಹೋಗಿ ಆಡದಿರೊ ಹರಿಯೆ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 49.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 626.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 140.
4. **Note:** Lyrics mentioned in yellow highlights are as per Ref. 2 and the lyrics given without highlights are as per Ref. 1. The wordings in Ref. 3 are same as in Ref. 2.

| | |
|---|---|
| ರಾಗ: ಆನಂದಭೈರವಿ ತಾಳ: ಅಟ | ರಾಗ: ಆನಂದಭೈರವಿ ತಾಳ: ಛಾಪು |
| | |
| ಹೊರ ಹೋಗಿ ಆಡದಿರೊ ಹರಿಯೆ | ಹೊರಗ್ಹೋಗಿ ಆಡದಿರ್ ಹರಿಯೆ ಎನ್ನ ದೊರೆಯೆ, ನೆರೆ- |
| ಎನ್ನ ದೊರೆಯೆ ‖ ಪ ‖ | ಹೊರೆಯವರು ಕಂಡರೆ ದೂರುವುದರಿಯೆ |
| | |
| ಮನೆಯೊಳಗಾಡುವುದೆ ಚೆಂದ - ನೆರೆ- | ಮನೆಯೊಳಗಾಡೋದೆ ಚಂದ, ನೆರೆ |
| ಮನೆಗಳಿಗೇಕೆ ಪೋಗುವೆಯೊ ಮುಕುಂದ | ಮನೆಗಳಿಗೆಲ್ಲ ಪೋಗುವರೆ ಮುಕುಂದ |
| ವನಿತೆಯರು ಮೋಹದಿಂದ - ನಿನ್ನ | ಮಾನಿನಿಯರು ಮೋಹದಿಂದ ನಿನ್ನ |
| ಮನವನಪಹರಿಸಿಕೊಂಬುವರೋ ಗೋವಿಂದ ‖ 1 ‖ | ಮನವನಪಹರಿಸಿಕೊಂಬುವರೊ ಗೋವಿಂದ |
| | |
| ಏನು ಬೇಡಿದರೂ ನಾ ಕೊಡುವೆ-ಕೆನೆ- | ಏನೇನು ಬೇಕಾದ್ದು ಕೊಡುವೆ, ಕೆನೆ |
| ಬೆಣ್ಣೆ ಕಜ್ಜಾಯವ ಕೈಯೊಳಗಿಡುವೆ | ಬೆಣ್ಣೆ ಸಕ್ಕರೆ ತಂದು ಕೈಯಲ್ಲಿ ಕೊಡುವೆ |
| ನಿನ್ನ ಗುಣಗಳನು ಕೊಂಡಾಡುವೆ - ನಿನಗೆ | ಅನುದಿನ ಗುಣಗಳ ಪಾಡುವೆ ,ನಿನ- |
| ಚಿನ್ನ ರನ್ನದ ಅಲಂಕಾರಗಳಿಡುವೆ ‖ 2 ‖ | ಗನುವಾಗಿ ಅಲಂಕಾರ ಮಾಡಿ ನಾ ನೋಡುವೆ |
| | |
| ಹೊಲಸು ಮೈಯವನೆನ್ನುವರೊ – ದೊಡ್ಡ | ಹೊಲಸು ಮೈಯವನೆಂಬುವರೊ, ದೊಡ್ಡ |
| ಕುಲಗಿರಿಯನ್ನು ಪೊತ್ತವನೆನ್ನುವರೊ | ಕುಲಗಿರಿಯನ್ನು ಎತ್ತಿದವನೆಂಬುವರೊ |
| ಬಲು ಕೇಶದವನೆನ್ನುವರೊ – ಆ | ಬಲು ಕೇಶದನೆಂಬುವರೊ, ಕರುಳ |
| ಎಳೆಯನನೆತ್ತಿದ ಕುರೂಪಿಯೆಂಬುವರೊ ‖ 3 ‖ | ಮಾಲೆಯ ಹಾಕಿದ ಘೋರನೆಂಬುವರೊ |
| | |
| ಭಿಕ್ಷೆಬೇಡಿದೆ ಎಂಬುವರೊ – ಭೂಮಿ | ಭಿಕ್ಷೆ ಬೇಡಿದವನೆಂಬುವರೊ, ಭುವಿ |
| ರಕ್ಷಿಪ ರಾಯರ ಕದಡಿದೆಯೆಂಬುವರೊ | ರಕ್ಷಿಪ ರಾಯರ ಕಡಿದನೆಂಬುವರೊ |
| ಲಕ್ಷ್ಮಿಯ ಕಳೆದೆಯೆಂಬುವರೊ – ವೈ- | ಲಕ್ಷ್ಮಿಯ ಕಳೆದನೆಂಬುವರೊ ವೈ- |

| | |
|---|---|
| ಲಕ್ಷಣ ಬೆಣ್ಣೆಯ ಕದ್ದೆಯೆಂಬುವರೊ ॥ 4 ॥ | ಲಕ್ಷಣ್ಯದವ ಬೆಣ್ಣೆಕಳ್ಳನೆಂಬುವರೊ |
| | |
| ಮಾನ ಬಿಟ್ಟವನೆನ್ನುವರೊ – ಮಹಾ | ಮಾನ ಬಿಟ್ಟವನೆಂಬುವರೊ, ಮಹಾ |
| ಹೀನರ ಬೆನ್ನಟ್ಟಿ ಹೋದನೆಂಬುವರೊ | ಹೀನರ ಹಿಂದಟ್ಟಿ ಹೋದನೆಂಬುವರೊ |
| ದಾನವ ವೈರಿಯೆಂಬುವರೊ – ಸುರ- | ದಾನವ ವೈರಿಯೆಂಬುವರೊ, ಸಿರಿ |
| ರಾನತ ಪುರಂದರ ವಿಠಲ ನೆಂಬುವರೊ ॥ 5 ॥ | ವನಜಾಕ್ಷ ಪುರಂದರ ವಿಠಲನೆಂಬುವರೊ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇಲ್ಲಿ ಮೂರನೇ ನುಡಿಯಿಂದ ದಶಾವತಾರಗಳನ್ನು ಹೇಳಿದೆ.

**ಹೊಲಸು ಮೈಯವನೆನ್ನುವರೊ** = ಮತ್ಸ್ಯಾವತಾರ

**ಕುಲಗಿರಿಯನ್ನು ಪೊತ್ತವನೆನ್ನುವರೊ** = ಕೂರ್ಮಾವತಾರ

**ಬಲು ಕೇಶದವನೆನ್ನುವರೊ** = ವರಾಹಾವತಾರ

**ಆ ಎಳೆಯನನೆತ್ತಿದ ಕುರೂಪಿಯೆಂಬುವರೊ** = ನರಸಿಂಹಾವತಾರ

**ಭಿಕ್ಷೆಬೇಡಿದೆ ಎಂಬುವರೊ** = ವಾಮನಾವತಾರ

**ಭೂಮಿ ರಕ್ಷಿಪ ರಾಯರ ಕದಡಿದೆಯೆಂಬುವರೊ** = ಪರಶುರಾಮಾವತಾರ

**ಲಕ್ಷ್ಮಿಯ ಕಳೆದೆಯೆಂಬುವರೊ** = ರಾಮಾವತಾರ

**ವೈಲಕ್ಷಣ ಬೆಣ್ಣೆಯ ಕದ್ದೆಯೆಂಬುವರೊ** = ಕೃಷ್ಣಾವತಾರ

**ಮಾನ ಬಿಟ್ಟವನೆನ್ನುವರೊ** = ಬೌದ್ಧಾವತಾರ

**ಮಹಾ ಹೀನರ ಬೆನ್ನಟ್ಟಿ ಹೋದನೆಂಬುವರೊ** = ಕಲ್ಕ್ಯಾವತಾರ

**ಆನತ** = ಬಾಗಿದ, ನಮಸ್ಕಾರ, ಅಡ್ಡಬಿದ್ದ

**Classification:** Keerthane
**Ankita:** purandara vittala
**Location:** NA
**Category:** Krishna Leele, dashavatara
**Sub-Category:** Krishna, arasa, mane, ADu, mukunda, gopi, hengasu, moha, mana, govinda, benne, sakkare, kai, parvata, bhumi, Lakshmi, kalla, asura, shatru, bangara,
**Pravachana:** NA
**Explanation:** NA